ಸಿ.ವಿ.ರಾಮನ್‌ವರೆಗಿನ ಸಂಶೋಧನೆಗಳು ಮತ್ತು ಪ್ರಯೋಗಗಳನ್ನು ಓದಿಕೊಂಡೆ. ಜೊತೆಗೆ ವಿಶ್ವದಲ್ಲಿ ಪ್ರಸ್ತುತ ನಡೆಯುತ್ತಿರುವ ಸಂಶೋಧನೆಗಳು ಮತ್ತು ಪ್ರಯೋಗಗಳ ಬಗ್ಗೆಯೇ ತಿಳಿದುಕೊಳ್ಳತೊಡಗಿದೆ. ಹಗಲೂ ರಾತ್ರಿ ಎಷ್ಟು ಓದಿದರೂ ನಾನು ತಿಳಿದುಕೊಂಡಿರುವುದು ಏನೇನೂ ಇಲ್ಲ ಎನಿಸುತ್ತಲೇ ಇತ್ತು.

ಹಲವಾರು ಅಂತರಾಷ್ಟ್ರೀಯ ಭೌತಶಾಸ್ತ್ರ ಜರ್ನಲ್‌ಗಳಲ್ಲಿ ಬರುವ ವರದಿಗಳನ್ನು ಓದತೊಡಗಿದೆ. ವಿಜ್ಞಾನಿಗಳು ಬಳಸುವ ಭಾಷೆ, ಬರೆಯುವ ಶೈಲಿ ಮತ್ತು ಇಂಗ್ಲಿಷ್ ಭಾಷೆ ನನ್ನನ್ನು ಬೆರಗುಗೊಳಿಸುತ್ತಿತ್ತು. ಹೊಸ ಹೊಸ ಪದಗಳು ಹುಟ್ಟಿಕೊಳ್ಳುತ್ತಲೇ ಇದ್ದವು. ಕೆಲವು ವರದಿಗಳಂತೂ ವಿಶ್ವದ ಸೃಷ್ಟಿ, ವಿಶ್ವದ ಮೂಲಭೂತ ವಸ್ತುಗಳ ಚಲನೆ, ಅವುಗಳ ನಿರಂತರ ಬದಲಾವಣೆ ಬೆರಗು ಹುಟ್ಟಿಸುವಂತಿತ್ತು. ಮತ್ತು ಸೃಷ್ಟಿಯಲ್ಲಿ ಮನುಷ್ಯ ಏನೂ ಇಲ್ಲ ಎನಿಸತೊಡಗಿತು. ವಿಷಯಗಳನ್ನು ತಿಳಿದುಕೊಳ್ಳುತ್ತಾ ಹೋದಂತೆ ಬ್ರಹ್ಮಾಂಡದಲ್ಲಿ ಏನೋ ಒಂದು ಲಯದ ಶಕ್ತಿ ಇದೆ ಎನಿಸುತ್ತಿತ್ತು. ನಾನು ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದೆ ಓದುವುದರಲ್ಲಿಯೇ ನಿರತನಾಗಿ ಹೋಗಿದ್ದೆ. ಎರಡು ವಾರಗಳಾದ ಮೇಲೆ ಒಂದು ದಿನ ಬೆಳಿಗ್ಗೆಯೆ ಪ್ರೊಫೆಸರ್ ಗುರುನಾಥ್ ಅವರ ಕೋಣೆಗೆ ಹೋಗಿ ಅವರ ಮುಂದೆ ಹಾಜರಾದೆ. ಸುಮಾರು ಎರಡು ಗಂಟೆ ಅವರ ಮುಂದೆ ನಾನು ಓದಿದ ವಿಷಯಗಳನ್ನೆಲ್ಲ ಹೇಳಿಕೊಂಡೆ. ಎಲ್ಲಾ ಕೇಳಿದ ಮೇಲೆ 'ಗುಡ್. ಪರವಾಗಿಲ್ಲ. ಇದರಲ್ಲಿ ನಿಮಗೆ ಯಾವ ವಿಷಯದಲ್ಲಿ ಸಂಶೋಧನೆ ಮಾಡಬೇಕೆನಿಸುತ್ತೆ?' ಎಂದರು. ಒಂದೆರಡು ಕ್ಷಣಗಳು ನಾನು ಏನೂ ಹೇಳಲು ಆಗಲಿಲ್ಲ. 'ವಿಷಯ ತೀರ್ಮಾನ ಮಾಡೋದು ಸ್ವಲ್ಪ ಕಷ್ಟಾನೆ. ಹುಂ ನೋಡೋಣ. ನಾನು ಯೋಚಿಸುತ್ತೇನೆ.




**ವ್ಯಂಗ್ಯಚಿತ್ರ**

ಗೆರೆ
ಡೊಂಕಾದರೂ
ಕಲೆ
ಡೊಂಕಲ್ಲ!

★ ನರಸಿಂಹ ಪೈ

ನೀವೂ ಯೋಚಿಸಿ' ಎಂದರು.

ಅನಂತರ ನಾನು ಎಲ್ಲಿ ಉಳಿದುಕೊಂಡಿದ್ದೀನಿ. ಊಟಕ್ಕೆ ಏನು ಮಾಡುತ್ತಿದ್ದೇನೆ ಎಂಬುದನ್ನೆಲ್ಲ ತಿಳಿದುಕೊಂಡರು. ನನ್ನ ಹಳ್ಳಿ, ತಂದೆ ತಾಯಿಯ ಬಗ್ಗೆಯೂ ಕೇಳಿ ತಿಳಿದುಕೊಂಡರು. ನಾವಿಬ್ಬರೂ ಇದ್ದ ಕಾರು ನಿಧಾನವಾಗಿ ಸೆಂಟ್ರಲ್ ಕಾಲೇಜ್ ಕ್ಯಾಂಪಸ್ ಬಿಟ್ಟು ಸರ್ರನೆ ಟ್ಯಾಂಕ್‌ಬಂಡ್ ರಸ್ತೆ ದಾಟಿ ಮಲ್ಲೇಶ್ವರಂ ರಸ್ತೆಗಳಲ್ಲಿ ಹೋಗುತ್ತಿತ್ತು. ನಾನು ಏನೂ ಮಾತನಾಡಲಿಲ್ಲ. ಪ್ರೊಫೆಸರ್ ಗುರುನಾಥ್ ಅವರು ಯಾಕಾದರೂ ನನ್ನನ್ನ ಕರೆದುಕೊಂಡು ಹೋಗುತ್ತಿದ್ದಾರೆ? ಬಹುಶಃ ಅವರ ಮನೆಗೆ ಕರೆದುಕೊಂಡು ಹೋಗುತ್ತಿರಬಹುದು ಎಂದುಕೊಂಡೆ.

ಕಾರು ಮಲ್ಲೇಶ್ವರಂನ 14ನೇ ಕ್ರಾಸಿನ ಒಂದು ಬಂಗಲೆ ಮುಂದೆ ನಿಂತುಕೊಂಡಿತು. ಅವರಿಗೆ ಮುಂಚೆ ನಾನೇ ಕೆಳಗಿಳಿದು ಮನೆಯ ಕಾಂಪೌಂಡ್ ಗೇಟ್ ತೆಗೆದೆ. ಕಾರನ್ನು ಕಾಂಪೌಂಡಿನ ಒಂದು ಮೂಲೆಯಲ್ಲಿದ್ದ ಪೋರ್ಟಿಕೋದಲ್ಲಿ ನಿಲ್ಲಿಸಿದ ಪ್ರೊಫೆಸರ್ ಕೆಳಗಿಳಿದು ನನ್ನ ಹತ್ತಿರಕ್ಕೆ ಬಂದು 'ಕೃಷ್ಣ ಇದು ನಮ್ಮ ಮನೆ' ಎಂದರು. ದೊಡ್ಡದಾದ ಕಾಂಪೌಂಡ್ ಒಳಗೆ ರಸ್ತೆಯ ಬದಿಗೆ ಬೆಳೆದು ನಿಂತಿರುವ ಎರಡು ದೊಡ್ಡ ಸಂಪಿಗೆ ಮರಗಳು ಮತ್ತು ಎರಡು ತೆಂಗಿನ ಮರಗಳು. ಜೊತೆಗೆ ದಾಳಿಂಬೆ ಮತ್ತು ಪಪ್ಪಾಯಿ ಗಿಡಗಳೂ ಇದ್ದವು. ದುಂಡು ಮಲ್ಲಿಗೆ, ಸೂಜಿ ಮಲ್ಲಿಗೆ, ಗುಲಾಬಿ, ಬಟನ್ ರೋಸ್ ಇತ್ಯಾದಿ ಹೂವಿನ ಗಿಡಗಳು ಇದ್ದವು. ಒಂದು ಮೂಲೆಯಲ್ಲಿ ತುಳಸಿ ಕಟ್ಟೆಯ ಮೇಲೆ ತುಳಸಿ ಗಿಡವೂ ಇದೆ. ಅದಕ್ಕೆ ಪೂಜೆ ಮಾಡಿ ಅಗರಬತ್ತಿ ಕಡ್ಡಿಗಳನ್ನು ಇಡಲಾಗಿದೆ.

ಮೊದಲ ಬಾರಿಗೆ ಅವರು ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋಗಿದ್ದು ಯಾಕೆ ಎಂಬ ಸಣ್ಣ ಗುಮಾನಿ ಮತ್ತು ಅಳುಕು ನನ್ನನ್ನು ತುಂಬಿಕೊಂಡಿತ್ತು. ಜುಬ್ಬಾ ಪೈಜಾಮಾದೊಂದಿಗೆ ಹಾಲ್‌ಗೆ ಬಂದ ಪ್ರೊಫೆಸರ್ ಅವರ ಹಿಂದೆಯೇ ಬಂದಿದ್ದವರನ್ನು ತೋರಿಸಿ 'ಕೃಷ್ಣ ಇವರು ನನ್ನ ಪತ್ನಿ ಶಾರದಾ ಮ್ಯಾಡಮ್' ಎಂದರು. ಎದ್ದು ನಿಂತು ಎರಡೂ ಕೈಮುಗಿದು 'ನಮಸ್ಕಾರ ಮ್ಯಾಡಮ್' ಎಂದೆ. ಇಬ್ಬರು ಒಳ್ಳೆ ಜೋಡಿಯಾಗಿ ಕಾಣಿಸುತ್ತಿದ್ದರು. ಈ ನಗರಗಳ ಸುಖ ಜೀವನ ಎಲ್ಲರನ್ನು ಸೊಗಸಾಗಿ ಮತ್ತು ಸೌಮ್ಯವಾಗಿ ಮಾಡಿಬಿಡುತ್ತದೇನೊ ಎನಿಸಿತು. ಮ್ಯಾಡಮ್ '`ಟೀ, ಕಾಫಿ ಏನು ಕುಡಿತೀರ?' ಕೇಳಿದರು. 'ಯಾವುದಾದರೂ ಕೊಡಿ ಮ್ಯಾಡಮ್' ಎಂದೆ. ಒಳಗೆ ಹೋಗಿಬಂದ ಅವರು ಟೀಪಾಯ್ ಮೇಲೆ ಬಾದಾಮಿ ಹಾಲಿನ ಕಪ್ ಇಟ್ಟು, 'ಮಧ್ಯಾಹ್ನ ಇಲ್ಲೇ ಊಟ ಮಾಡ್ಕೊಂಡು ಹೋಗಿ' ಎಂದರು. 'ಇಲ್ಲ ಮ್ಯಾಡಮ್, ನೀವು ತೊಂದರೆ ತೆಗೆದುಕೊಳ್ಳಬೇಡಿ' ಎಂದೆ. 'ಇದರಲ್ಲಿ ಏನಿದೆ ತೊಂದರೆ' ಎಂದು ನಕ್ಕರು.

ಪ್ರೊಫೆಸರ್ ಕೊಠಡಿಯಲ್ಲಿ ಮ್ಯಾಡಮ್ ಊಟಕ್ಕೆ ಕರೆಯುವವರೆಗೂ ನಮ್ಮಿಬ್ಬರ ಮಧ್ಯೆ ನನ್ನ ಸಂಶೋಧನೆಯ ಬಗ್ಗೆ ದೀರ್ಘವಾದ ಸಮಾಲೋಚನೆ ನಡೆದಿತ್ತು. ಈಗ ಡೈನಿಂಗ್ ಕೋಣೆಯಲ್ಲಿ ಮೇಜಿನ ಮುಂದೆ ಪ್ರೊಫೆಸರ್ ಮತ್ತು ನಾನು ಕುಳಿತುಕೊಂಡಿದ್ದೆವು. ಮ್ಯಾಡಮ್ ತಟ್ಟೆಗಳಲ್ಲಿ ಎಲ್ಲಾ ಐಟಂಗಳನ್ನು ಒಂದೊಂದಾಗಿ ಬಡಿಸುತ್ತಿದ್ದರು. ಪ್ರೊಫೆಸರ್ ತಮ್ಮ ಪತ್ನಿಯನ್ನು 'ಶಾರದಾ ನೀನು ಕುಳಿತುಕೊ' ಎಂದರು. 'ಇನ್ನೇನು ಸಾವಿತ್ರಿ ಬರ್ತಾಳೆ. ನಾವಿಬ್ಬರು ಊಟ ಮಾಡ್ತೀವಿ. ನೀವು ಮಾಡಿ' ಎಂದರು. ಸಾವಿತ್ರಿ ಎಂದರೆ ಮಗಳೆ ಇರಬೇಕು ಎಂದುಕೊಂಡೆ. ಅಷ್ಟರಲ್ಲಿ ಮ್ಯಾಡಮ್ 'ನನ್ನ ಮಗಳು ಮಹಾರಾಣಿ ಕಾಲೇಜಿನಲ್ಲಿ ಬಿ.ಎಸ್ಸಿ ಓದ್ತಾ ಇದ್ದಾಳೆ. ಮಗ ಮೈಸೂರಿನಲ್ಲಿ ಎಂ.ಬಿ.ಬಿ.ಎಸ್ ಓದ್ತಾ ಇದ್ದಾನೆ. ಕೊನೆ ವರ್ಷ. ಮಗ ಮಗಳು ಇಬ್ಬರೂ ಅವಳಿ ಜವಳಿ. ಸಾವಿತ್ರಿ ಕೇವಲ ಐದು ನಿಮಿಷ ದೊಡ್ಡವಳು. ಪ್ರೊಫೆಸರ್‌ಗೆ ರಾಮಾಯಣ, ಮಹಾಭಾರತ ಪುರಾಣಗಳೆಂದರೆ ಬಹಳ ಇಷ್ಟ. ಭೌತಶಾಸ್ತ್ರಕ್ಕಿಂತ ಪುರಾಣಗಳನ್ನೇ ಹೆಚ್ಚೆಚ್ಚು ಓದ್ತಾ ಇರ್ತಾರೆ. ಅದಕ್ಕೆ ಮಗಳಿಗೆ ಸಾವಿತ್ರಿ ಅಂತ ಹೆಸರಿಟ್ಟಿದ್ದಾರೆ' ಎಂದರು.

ಪ್ರೊಫೆಸರ್ 'ನನಗೆ ನಮ್ಮ ದೇಶದ ವೇದ ಪುರಾಣಗಳೆಂದರೆ ತುಂಬಾ ಇಷ್ಟ' ಎಂದರು. ಅವರ ಮಾತಿನಿಂದ ಸ್ವಲ್ಪ ಕುತೂಹಲಗೊಂಡು ಅವರ ಮುಖವನ್ನೇ ನೋಡಿದೆ. ಅವರು ನನ್ನ ಕಡೆಗೆ ನೋಡಿ ನಕ್ಕರು. ನಾನೂ ಮುಗುಳು ನಕ್ಕೆ. ಬಾಗಿಲಲ್ಲಿ ಸದ್ದಾಗಿ ಒಂದು ಸುಂದರವಾದ ಹೆಣ್ಣು ಒಳಗೆ ಬಂದಳು. ಆಕೆ ಒಳಗೆ ಬರುತ್ತಿದ್ದಂತೆ, ಶಾರದಾ ಮ್ಯಾಡಮ್, 'ಸಾವಿತ್ರಿ ಇವರು ಕೃಷ್ಣ ಅಂತ. ನಿಮ್ಮ ತಂದೆ ಹತ್ತಿರ ಸಂಶೋಧನೆ ಮಾಡ್ತಾ ಇದ್ದಾರೆ' ಎಂದರು. ಆಕೆ ಕೈಯಲಿದ್ದ ಪುಸ್ತಕಗಳ ಬ್ಯಾಗನ್ನು ಅಲ್ಲೇ ಇದ್ದ ಕುರ್ಚಿ ಮೇಲಿಟ್ಟು ಯಾವ ಬಿಗುಮಾನವೂ ಇಲ್ಲದೆ ಎರಡು ಕೈಗಳನ್ನೂ ಜೋಡಿಸಿ 'ನಮಸ್ತೆ' ಎಂದು ಎದುರಿಗೆ ನಿಂತುಕೊಂಡಳು. ನಾನು ದಿಢೀರನೆ ಎದ್ದು ನಿಂತುಕೊಂಡು 'ನಮಸ್ಕಾರ' ಎಂದೆ.

ಸಾವಿತ್ರಿ ಬ್ಯಾಗ್ ತೆಗೆದುಕೊಂಡು ಒಳಗೆ ಹೋದಳು. ಬಿಳಿ ಜರಿ ಅಂಚಿರುವ ಹಸಿರು ಸೀರೆಯ ಜೊತೆಗೆ ಅದೇ ಬಣ್ಣದ ಕುಪ್ಪಸ ತೊಟ್ಟುಕೊಂಡಿದ್ದ ಸಾವಿತ್ರಿ ಕೋಲು ಮುಖದ ಸುಂದರಿಯಾಗಿದ್ದಳು. ನೀಳ ಮೂಗು, ತೆಳುವಾದ ಕೆನ್ನೆಗಳು ಮತ್ತು ಹಣೆಯಲ್ಲಿ ಸಣ್ಣದಾದ ಕೆಂಪು ಬೊಟ್ಟು ಕಾಣಿಸುತ್ತಿತ್ತು. ಕಪ್ಪಾದ ನೀಳ ಜಡೆ. ಒಂದೇ ನೋಟಕ್ಕೆ ಆಕರ್ಷಿಸುವ ಸುಂದರವಾದ ನಗುಮುಖ. ಆಕೆಯನ್ನು ಹಿಂಬಾಲಿಸಿದ ನನ್ನ ಕಣ್ಣುಗಳಿಗೆ ಕಡಿವಾಣ ಹಾಕಲು ನನ್ನ ಕಣ್ಣೋಟವನ್ನು ಪಕ್ಕಕ್ಕೆ ತಿರುಗಿಸಿದೆ.

ನನ್ನ ಮುಖದ ಮೇಲೆ ಯಾವ ರೀತಿಯ ಬದಲಾವಣೆಗಳು ಕಾಣಿಸಿಕೊಂಡವೊ ಏನೊ? ಒಂದೆರಡು ಕ್ಷಣಗಳು ಗಾಬರಿಯಾಯಿತು. ಅದೇ ಸಮಯಕ್ಕೆ ಪ್ರೊಫೆಸರ್ ಅವರು, 'ಕೃಷ್ಣ ನೀವು ಇನ್ನು ಹೋಗಬಹುದು. ನಾಳೆ ಕಾಲೇಜಿನಲ್ಲಿ ಭೇಟಿಯಾಗೋಣ' ಎಂದುಬಿಟ್ಟರು. ನಾನು ಸಾವಿತ್ರಿಯನ್ನು ನೋಡಿದ್ದಕ್ಕೆ ಅವರು ಹಾಗೇ ಅಂದರೆ ಎನ್ನುವ ಸಂದೇಹ ನನ್ನನ್ನು ಒಂದು ಕ್ಷಣ